**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:-** 2021-22 ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ: 2225-03-001-0-01-071 (ಕಟ್ಟಡ ವೆಚ್ಚಗಳು) ಹಾಗೂ ಲೆಕ್ಕಶಿರ್ಷಿಕೆ: 2225-03-277-02-08-059(ಇತರೆ ಖರ್ಚುಗಳು) ರಡಿ ಲಭ್ಯವಿರುವ ಅನುದಾನದಲ್ಲಿ ರೂ.17.70 ಲಕ್ಷಗಳನ್ನು ಲೆಕ್ಕಶಿರ್ಷಿಕೆ: 2225-03-001-0-01-051 (ಸಾಮಾನ್ಯ ವೆಚ್ಚಗಳು) ಗೆ ಮರು ಹೊಂದಾಣಿಕೆ ಮಾಡುವ ಬಗ್ಗೆ.

**ಓದಲಾಗಿದೆ:-**
1. 2021-22 ಸಾಲಿನ ಆಯವ್ಯಯ ಸವಿಸರ ವೆಚ್ಚದ ಅಂದಾಜುಗಳ ಸಂಪುಟ-5
2. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಏಕ ಕಡತ ಸಂಖ್ಯೆ: ಹಿಂವಕಇ/ಸಿ-9/ಸಿಆರ್-31/2021-22,ದಿನಾಂಕ: 31/01/2022.

******

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮಸಂಖ್ಯೆ (1) ರಲ್ಲಿ 2021-22ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಅನುದಾನವನ್ನು ಹಂಚಿಕೆ ಮಾಡಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮಸಂಖ್ಯೆ (2)ರ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರು ಪ್ರಸ್ತಾವನೆಯಲ್ಲಿ 2021-22ನೇ ಸಾಲಿನ ಅಯವ್ಯಯದಲ್ಲಿನ ಲೆಕ್ಕಶೀರ್ಷಿಕೆ: 2225-03-001-0-01-071(ಕಟ್ಟಡ ವೆಚ್ಚಗಳು) ರಡಿ ಒದಗಿಸಿರುವ ರೂ.17.00 ಲಕ್ಷಗಳ ಅನುದಾನದಲ್ಲಿ ರೂ.7.00 ಲಕ್ಷಗಳ ಅನುದಾನ ಹಾಗೂ ಲೆಕ್ಕಶೀರ್ಷಿಕೆ: 2225-03-277-02-08-059 (ಇತರೆ ಖರ್ಚುಗಳು) ರಡಿ ಒದಗಿಸಿರುವ ರೂ.75.00 ಲಕ್ಷಗಳ ಅನುದಾನದಲ್ಲಿ ರೂ.10.70 ಲಕ್ಷಗಳ ಉಳಿಕೆಯಾಗಿರುತ್ತದೆ. ಆಯುಕ್ತಾಲಯದಲ್ಲಿ ಇ-ಆಫೀಸ್ ತಂತ್ರಾಂಶವನ್ನು ಅನುಷ್ಠಾನಗೊಳಿಸಲು ಸದರಿ ಲೆಕ್ಕಶೀರ್ಷಿಕೆಗಳಡಿ ಉಳಿಕೆಯಾದ ಒಟ್ಟು ರೂ.17.70 ಲಕ್ಷಗಳನ್ನು ಲೆಕ್ಕ ಶೀರ್ಷಿಕೆ: 2225-03-001-0-01-051(ಸಾಮಾನ್ಯ ವೆಚ್ಚಗಳು) ರಡಿ ಮರು ಹೊಂದಾಣಿಕೆ ಮಾಡುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 52 ಬಿಎಂಎಸ್ 2022**
**ಬೆಂಗಳೂರು, ದಿನಾಂಕ: 21.02.2022**

2021-22ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಲೆಕ್ಕಶೀರ್ಷಿಕೆ: 2225-03-001-0-01-071 (ಕಟ್ಟಡ ವೆಚ್ಚಗಳು) ರಡಿ ಒದಗಿಸಿರುವ ರೂ.17.00 ಲಕ್ಷಗಳ ಅನುದಾನದಲ್ಲಿ ರೂ.7.00 ಲಕ್ಷಗಳ ಅನುದಾನವನ್ನು ಹಾಗೂ ಲೆಕ್ಕಶೀರ್ಷಿಕೆ: 2225-03-277-02-08-059 (ಇತರೆ ಖರ್ಚುಗಳು) ರಡಿ ಒದಗಿಸಿರುವ ರೂ.75.00 ಲಕ್ಷಗಳ ಅನುದಾನದಲ್ಲಿ ರೂ.10.70 ಲಕ್ಷಗಳ ಅನುದಾನವು ಉಳಿಕೆಯಾಗಿದ್ದು, ಒಟ್ಟು ಉಳಿಕೆಯಾದ ರೂ.17.70 ಲಕ್ಷಗಳನ್ನು

2..

21/02/22

ಆಯುಕ್ತಾಲಯದಲ್ಲಿ ಇ-ಆಫೀಸ್ ತಂತ್ರಾಂಶವನ್ನು ಅನುಷ್ಠಾನಗೊಳಿಸಲು ಲೆಕ್ಕ ಶೀರ್ಷಿಕೆ: 2225-03-001-0-01-051 (ಸಾಮಾನ್ಯ ವೆಚ್ಚಗಳು) ರಡಿ ಮರು ಹೊಂದಾಣಿಕೆ ಮಾಡಿ ಆದೇಶಿಸಿದೆ. ಸದರಿ ಅನುದಾನದ ಬಳಕೆ ಮಾಡುವಾಗ ಕೆ.ಟಿ.ಪಿ.ಪಿ. ಕಾಯ್ದೆ ಹಾಗೂ ಅದರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.ಬಳಕೆಯ ವಿವರಗಳನ್ನು ಮಾಹಿತಿಗಾಗಿ ಆಯುಕ್ತಾಲಯದ ವೆಬ್‌ಸೈಟ್ ನಲ್ಲಿ ಅಳವಡಿಸುವುದು.

ಈ ಆದೇಶವನ್ನುಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 11 ಟಿಎಫ್‌ಪಿ 2007 ದಿನಾಂಕ: 27/11/2007 ರಲ್ಲಿ ಸರ್ಕಾರದ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿರವರಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ

Shempaueen 21/02/2022

**(ಷಾಹೀನ್ ಪರ್ವೀನ್ ಕೆ)**
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು, (ಎ ಮತ್ತು ಇ), ಬೆಂಗಳೂರು.
2. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
3. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ-3&9), ವಿಧಾನಸೌಧ, ಬೆಂಗಳೂರು.
4. ಖಜನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ ಇಲಾಖೆ, ಬೆಂಗಳೂರು.

ಪ್ರತಿ ಮಾಹಿತಿಗಾಗಿ:-

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳು,ವಿಕಾಸಸೌಧ,ಬೆಂಗಳೂರು.
2. ಸರ್ಕಾರದ ಅಪರ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತ ಸಹಾಯಕರು,ವಿಕಾಸಸೌಧ,ಬೆಂಗಳೂರು.
3. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

***********